**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ಜೇವರ್ಗಿ.</u>**

**<u>ಸಿ.ಸಿ.ನಂ.497/2018</u>**

ಸರಕಾರದ ಪರವಾಗಿಃ ನೆಲೋಗಿ ಪೋ.ಠಾ., ನೆಲೋಗಿ
-:ವಿರುದ್ಧ:-

**<u>ಆರೋಪಿತರು</u>***:*

1. ಉಮೇಶ ತಂದೆ ಲಕ್ಷ್ಮಣ ಆನೂರ
   ವಃ 26 ವರ್ಷ*,* ಉಃ ಒಕ್ಕಲುತನ*,*

2. ಸುನೀಲ @ ಸುನೀಲಕುಮಾರ ತಂದೆ ಪೀರಪ್ಪ ಕರ್ಚಿ
   ವಃ 24 ವರ್ಷ*,* ಉಃ ಒಕ್ಕಲುತನ*,*

3. ಅವದೂತ ತಂದೆ ಕಾಮಣ್ಣ ಕರ್ಚಿ
   ವಃ *35* ವರ್ಷ*,* ಉಃ ಒಕ್ಕಲುತನ*,*
   ಎಲ್ಲರೂ ಸಾಃ ಇಟಗಾ*,* ತಾಃ ಜೇವರ್ಗಿ

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತರ ಹೇಳಿಕೆಗಳು</u>**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ ಆ-1 ಆ-2

ಆ-3

ಪ್ರಃ2: ಪ್ರಾಸಾ-2 ಪಲ್ಲಾ ಸತ್ಯಶೀಲರೆಡ್ಡಿ ನಿವೃತ್ತ ಎಇಇ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 01-07-2018 ರಂದು ನೆಲೋಗಿ ಪಿ ಎಸ್ ಐ ಅವರು ಇಟಗಾ ಗ್ರಾಮದಲ್ಲಿ ಸಂಗ್ರಹಿಸಿದ ಮರಳಿನ ಮೌಲ್ಯವನ್ನು ತಿಳಿಸಲು ತಮ್ಮ ಪತ್ರದಲ್ಲಿ ಕೊರಿರುತ್ತಾರೆ, ಸದರಿ ಮರಳು 415.70 ಘನ ಮೀಟರ ಅದರ ಮೌಲ್ಯ 2,70,205/- ಇರುತ್ತದೆ, ಆ ಬಗ್ಗೆ ಮೌಲ್ಯ ಮಾಪನ ಪ್ರಮಾಣ ಪತ್ರವನ್ನು ನೀಡಿರುತ್ತೇನೆ, ಎಂದು ತಮ್ಮ ಸಾಕ್ಷಿಯನ್ನು ನುಡಿದಿರುತ್ತಾರೆ, ಅದಕ್ಕೆ ನೀವೇನು ಹೇಳುತ್ತಿರಿ ?

ಉಃ ಆ-1 ಆ-2

ಆ-3

ಪ್ರಃ3: ಪ್ರಾಸಾ-3 ಪೀರಪ್ಪ, ಮುಖ್ಯ ಪೇದೆ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 07-08-2018 ರಂದು ಬೆಳಿಗ್ಗೆ 11-15 ಗಂಟೆಗೆ ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೂಂಡ ನೀಲಿ ಬಣ್ಣದ ಟ್ರ್ಯಾಕ್ಟರನ್ನು ಇಟಗಾ ಗ್ರಾಮದದಿಂದ ನೆಲೋಗಿ ಪೊಲೀಸ ಠಾಣೆಗೆ ತಂದು ತನಿಖಾಧಿಕಾರಿಯ ಮುಂದೆ ಹಾಜರ ಪಡಿಸಿರುತ್ತೇನೆ, ತಾನು ನಾಲ್ಕು ಫೋಟೋಗಳನ್ನು ನೋಡುತ್ತಿದ್ದು ಅವುಗಳಲ್ಲಿ ಕಾಣುವ ಟ್ರ್ಯಾಕ್ಟರನ್ನು ಆ ದಿನ ನಾವು ವಶಪಡಿಸಿಕೊಂಡಿರುತ್ತೇವೆ, ಎಂದು ತಮ್ಮ ಸಾಕ್ಷಿಯನ್ನು ನುಡಿದಿರುತ್ತಾರೆ, ಅದಕ್ಕೆ ನೀವೇನು ಹೇಳುತ್ತಿರಿ ?

ಉಃ ಆ-1 ಆ-2

ಆ-3

ಪ್ರಃ4: ಪ್ರಾಸಾ-4 ಚಂದ್ರಶೇಖರ ಸಿಪಿಐ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 01-07-2018 ರಂದು ತಾನು ತನ್ನ ಮೇಲಾಧಿಕಾರಿಗಳ ಆದೇಶದಂತೆ ನೆಲೋಗಿ ಪೊಲೀಸ ಠಾಣೆಯ ವ್ಯಾಪ್ತಿಯ ಇಟಗಾ ಗ್ರಾಮದ ಭೀಮಾ ನದಿಯಿಂದ ಅಕ್ರಮವಾಗಿ ಟ್ರ್ಯಾಕ್ಟರಗಳ ಮುಖಾಂತರ ಮರಳನ್ನು ತೆಗೆದು ಸಂಗ್ರಹಣ ಮಾಡುತ್ತಿದ್ದಾರೆಂಬ ಮಾಹಿತಿ ಬಂದ ಮೆರೆಗೆ ತಾನು ಮತ್ತ ತಮ್ಮ ಸಿಬ್ಬಂದಿಯಾದ ಚಾಸಾ-6 ರಿಂದ ಚಾಸಾ-8 ಅವರು ನೆಲೋಗಿ ಪೊಲೀಸ ಠಾಣೆಗೆ ಭೇಟ್ಟಿ ನೀಡಿ ಚಾಸಾ-4 ಮತ್ತು 5 ಅವರಿಗೆವಿಷಯ ತಿಳಿಸಿ ಪಂಚರನ್ನಾಗಿ ಚಾಸಾ-2 ಮತ್ತು 3 ಅವರನ್ನು ಬರಮಾಡಿಕೊಂಡು ಸಿಬ್ಬಂದಿಯಾದ ಚಾಸಾ-2 ರಿಂದ ಚಾಸಾ-8 ಅವರು ಸೇರಿ ಮದ್ಯಾಹ್ನ 01-15 ಗಂಟೆಗೆ ಗುನ್ನಾ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಒಂದು ಟ್ರ್ಯಾಕ್ಟರನಲ್ಲಿ ಮರಳು ತುಂಬುತಿದ್ದು, ಅವರು ತಮ್ಮನ್ನು ನೋಡಿ ಓಡಿ ಹೋದರು,

ನಂತರ ಪಂಚರ ಸಮಕ್ಷಮ ಪರೀಶಿಲನೆ ಮಾಡಲಾಗಿ ಇಟಗಾ ಗ್ರಾಮದ ಗೈರಾಣಿ ಸರ್ವೆ ನಂ.01 ರಲ್ಲಿ ಅಕ್ರಮವಾಗಿ ಸುಮಾರು 90 ಟಿಪ್ಪರನಷ್ಟು ಮರಳನ್ನು ಸಂಗ್ರಹಣೆ ಮಾಡಿದ್ದು ಕಂಡು ಬರುತ್ತದೆ, ನಂತರ ಸದರಿ ಮರಳನ್ನು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡೆವು, ಮರಳಿನ ಅಂದಾಜು ಮೌಲ್ಯ ರೂ.3,60,000/- ಇರುತ್ತದೆ, ನಂತರ ಓಡಿ ಹೋದ ವ್ಯಕ್ತಿಗಳ ಹೆಸರು ಉಮೇಶ ಮತ್ತು ಸುನೀಲ ಎಂದು ತಿಳಿದು ಬಂದಿರುತ್ತದೆ, ನಂತರ ಠಾಣೆಗೆ ಬಂದು ಠಾಣಾಧಿಕಾರಿಗಳ ಮುಂದೆ ವರದಿ, ಪಂಚನಾಮೆಯನ್ನು ಮುಂದಿನ ಕ್ರಮಕ್ಕಾಗಿ ನೀಡಿರುತ್ತೇನೆ, ದಿನಾಂಕ 19-07-2018 ರಂದು ಆರೋಪಿತರ ಗುರುತಿಸುವಿಕೆ ಬಗ್ಗೆ ತನಿಖಾಧಿಕಾರಿಗಳಿಗೆ ಮರು ಹೇಳಿಕೆ ನೀಡಿರುತ್ತೇನೆ ಎಂದು ತಮ್ಮ ಸಾಕ್ಷಿಯನ್ನು ನುಡಿದಿರುತ್ತಾರೆ, ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1 ಆ-2

ಆ-3

ಪ್ರಃ5: ಪ್ರಾಸಾ-6 ಶ್ರೀಶೈಲ ಮುಖ್ಯ ಪೇದೆ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 01-07-2018 ರಂದು ಮದ್ಯಾಹ್ನ 01-10 ಸುಮಾರಿಗೆ ಚಾಸಾ-1 ಅವರು ತನಗೆ ಮತ್ತು ಚಾಸಾ-2 ರಿಂದ ಚಾಸಾ-8 ಅವರಿಗೆ ಹೇಳಿದ್ದೇನೆಂದರೆ, ಇಟಗಾ ಗ್ರಾಮದ ಭೀಮಾ ನದಿಯಿಂದ ಅಕ್ರಮವಾಗಿ ಟ್ರ್ಯಾಕ್ಟರಗಳ ಮುಖಾಂತರ ಮರಳನ್ನು ತೆಗೆದು ಸಂಗ್ರಹಣೆ ಮಾಡುತ್ತಿದ್ದಾರೆಂಬ ಮಾಹಿತಿ ಬಂದ ಮೆರೆಗೆ ಚಾಸಾ-1, ತಾನು, ಮತ್ತು ಚಾಸಾ-5 ರಿಂದ 8 ವಿಷಯ ತಿಳಿಸಿ ಪಂಚರನ್ನಾಗಿ ಚಾಸಾ-2 ಮತ್ತು 3 ಅವರನ್ನು ಬರಮಾಡಿಕೊಂಡು ಸಿಬ್ಬಂದಿಯಾದ ಚಾಸಾ-1 ರಿಂದ ಚಾಸಾ-3 ಮತ್ತು ಚಾಸಾ-5 ರಿಂದ 8 ಅವರು ಸೇರಿ ಮದ್ಯಾಹ್ನ 01-15 ಗಂಟೆಗೆ ಗುನ್ನಾ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಒಂದು ಟ್ರ್ಯಾಕ್ಟರನಲ್ಲಿ ಮರಳು ತುಂಬುತಿದ್ದು, ಅವರು ತಮ್ಮನ್ನು ನೋಡಿ ಓಡಿ ಹೋದರು, ನಂತರ ಪಂಚರ ಸಮಕ್ಷಮ ಪರೀಶಿಲನೆ ಮಾಡಲಾಗಿ ಇಟಗಾ

ಗ್ರಾಮದ ಗೈರಾಣಿ ಸರ್ವೆ ನಂ.01 ರಲ್ಲಿ ಅಕ್ರಮವಾಗಿ ಸುಮಾರು 90 ಟಿಪ್ಪರನಷ್ಟು ಮರಳನ್ನು ಸಂಗ್ರಹಣೆ ಮಾಡಿದ್ದು ಕಂಡು ಬರುತ್ತದೆ, ನಂತರ ಸದರಿ ಮರಳನ್ನು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡೆವು, ಮರಳಿನ ಅಂದಾಜು ಮೌಲ್ಯ ರೂ.3,60,000/- ಇರುತ್ತದೆ, ನಂತರ ಓಡಿ ಹೋದ ವ್ಯಕ್ತಿಗಳ ಹೆಸರು ಉಮೇಶ ಮತ್ತು ಸುನೀಲ ಎಂದು ತಿಳಿದು ಬಂದಿರುತ್ತದೆ, ನಂತರ ಚಾಸಾ-1 ಅವರು ಠಾಣೆಗೆ ಬಂದು ಠಾಣಾಧಿಕಾರಿಗಳ ಮುಂದೆ ವರದಿ, ಪಂಚನಾಮೆಯನ್ನು ಮುಂದಿನ ಕ್ರಮಕ್ಕಾಗಿ ನೀಡಿರುತ್ತಾರೆ, ದಿನಾಂಕ 01-07-2018 ರಂದು ಘಟನೆಯ ಬಗ್ಗೆ ಚಾಸಾ-11 ಅವರಿಗೆ ಹೇಳಿಕೆ ನೀಡಿರುತ್ತೇನೆ, ದಿನಾಂಕ 19-07-2018 ರಂದು ಆರೋಪಿತರ ಗುರುತಿಸುವಿಕೆ ಬಗ್ಗೆ ತನಿಖಾಧಿಕಾರಿಗಳಿಗೆ ಮರು ಹೇಳಿಕೆ ನೀಡಿರುತ್ತೇನೆ ಎಂದು ತಮ್ಮ ಸಾಕ್ಷಿಯನ್ನು ನುಡಿದಿರುತ್ತಾರೆ, ಅದಕ್ಕೆ ನೀವೇನು ಹೇಳುತ್ತಿರಿ?

ಉಃ ಆ-1 ಆ-2

ಆ-3

ಪ್ರಃ6 ಪ್ರಾಸಾ-7 ಮಲ್ಲಣ್ಣ ಎಎಸ್ಐ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 01-07-2018 ರಂದು ಸಾಯಂಕಾಲ 4-10 ಗಂಟೆ ಸಮಯದಲ್ಲಿ ತಾನು ಠಾಣೆಯಲ್ಲಿದ್ದಾಗ ಚಾಸಾ-1 ಅವರು ಜಪ್ತಿ ಪಂಚನಾಮೆಯೊಂದಿಗೆ ಠಾಣೆಗೆ ಹಾಜರಾಗಿ ವರದಿಯನ್ನು ಸಲ್ಲಿಸಿದ್ದು, ಅದನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಲಯಕ್ಕೆ ಮತ್ತು ತನ್ನ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ, ಅದೇ ದಿನ ಚಾಸಾ-4 ರಿಂದ 8 ಅವರ ಹೇಳಿಕೆ ಪಡೆದಿರುತ್ತೇನೆ, ದಿನಾಂಕ 02-07-2018 ರಂದು ಮರಳಿನ ಮೌಲ್ಯಮಾಪನ ಕೊರಿ ಪಿಡಬ್ಲುಡಿ ಇಲಾಖೆಗೆ ಪತ್ರ ಬರೆದು ದಿನಾಂಕ 06-08-2018 ರದು ಮರಳಿನ ಮೌಲ್ಯ ಮಾಪನ ವರದಿ ಪಡೆದಿರುತ್ತೇನೆ, ದಿನಾಂಕ 07-08-2018 ರಂದು ಚಾಸಾ-9 ಅವರು ಗುನ್ನೆಗೆ ಬಳಸಿದ ಒಂದು ಟ್ರಾಕ್ಟರ ಮತ್ತು ಒಂದು ಟ್ರಾಲಿಯನ್ನು ಠಾಣೆಗೆ ತಂದು ಹಾಜರುಪಡಿಸಿರುತ್ತೇನೆ,

ದಿನಾಂಕ 19-07-2018 ರಂದು ಆರೋಪಿತರ ಗುರುತಿಸುವಿಕೆ ಬಗ್ಗೆ ಚಾಸಾ-1, 4 ರಿಂದ 8 ಅವರ ಮರು ಹೇಳಿಕೆ ಪಡೆದಿರುತ್ತೇನೆ, ದಿನಾಂಕ 18-11-2018 ರಂದು ಆರೋಪಿತರು ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು, ಅವರನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ, ದಿನಾಂಕ 19-07-2018 ರಂದು ಆರೋಪತರು ತಾವೆ ಮರಳು ಸಂಗ್ರಹಿಸಿರುತ್ತಾರೆಂದು ಅವರ ಸ್ವಖುಷಿ ಹೇಳಿಕೆ ಪಡೆದಿರುತ್ತೇನೆ, ದಿನಾಂಕ 15-07-2018, 08-08-2018, 29-10-2018 ರಂದು ವರದಿಗಳನ್ನು ಪಡೆದಿರುತ್ತೇನೆ, ದಿನಾಂಕ 18-11-2018 ರಂದು ತನಿಖೆ ಮುಗಿಸಿ ಆರೋಪಿತರ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ದೊಷಾರೊಪಣೆ ಪತ್ರವನ್ನು ಸಲ್ಲಿರುತ್ತೇನೆಂದು, ತಮ್ಮ ಸಾಕ್ಷಿಯನ್ನು ನುಡಿದಿರುತ್ತಾರೆ, ಅದಕ್ಕೆ ನೀವೇನು ಹೇಳುತ್ತಿರಿ ?

ಉಃ ಆ-1 ಆ-2

ಆ-3

ಪ್ರಃ 7 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ ಆ-1 ಆ-2

ಆ-3

ಪ್ರ-8 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ ಆ-1 ಆ-2

ಆ-3

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿಃ 03-03-2026

ಸಿವಿಲ್ ಹಾಗೂ ಪ್ರ ದ ನ್ಯಾ , ದಂಡಾಧಿಕಾರಿಗಳು,
ಜೇವರ್ಗಿ.